# ಕರ್ನಾಟಕ ಸರ್ಕಾರ
## ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

E-Mail Id: adpiqsection@gmail.com    Phone No: 080-23460525


**ಸಂಖ್ಯೆ: ಕ್ಯೂ3/ಡಿಪಿಎಸ್ಇ/ಡಿ.ಜಿ.ಅಂಕಪಟ್ಟಿ/05/2020-21**    **ದಿನಾಂಕ: 29.11.2022**

**<u>ಸುತ್ತೋಲೆ</u>**

**ವಿಷಯ:**-2020-21 ನೇ ಸಾಲಿನಲ್ಲಿ ಡಿಪ್ಲೋಮಾ ಇನ್ ಪ್ರಿಸ್ಕೂಲ್ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ ಅಂಕಪಟ್ಟಿಗಳನ್ನು ಆನ್‌ಲೈನ್ ಮೂಲಕ ವಿತರಿಸುವ ಬಗ್ಗೆ.

ಉಲ್ಲೇಖ:-ಸರ್ಕಾರಿ ಆದೇಶ ಸಂಖ್ಯೆ:ಇಡಿ 80 ಮಾಹಿತಿ 2021,ಬೆಂಗಳೂರು, ದಿನಾಂಕ: 05.07.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020-21 ನೇ ಸಾಲಿನಲ್ಲಿ ದ್ವಿತೀಯ ವರ್ಷದ ಡಿಪ್ಲೋಮಾ ಇನ್ ಪ್ರಿಸ್ಕೂಲ್ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳಿಗೆ ಆನ್‌ಲೈನ್ ಮೂಲಕ DIGITALLY SIGNED ಅಂಕಪಟ್ಟಿಯನ್ನು ವಿತರಿಸಲು ಉಲ್ಲೇಖದ ಸರ್ಕಾರಿ ಪತ್ರದಲ್ಲಿ ಆದೇಶಿಸಿದೆ.

- **ಅಂಕಪಟ್ಟಿ ಡೌನ್ ಲೋಡ್ ಮಾಡಿಕೊಳ್ಳುವ ವಿಧಾನ :-** ದ್ವಿತೀಯ ವರ್ಷದ ಡಿ.ಪಿ.ಎಸ್.ಇ ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು 54 ಪ್ರಶಿಕ್ಷಣಾರ್ಥಿಗಳು DIGITALLY SIGNED ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಸಂಬಂಧ ಅಭ್ಯರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ಎಸ್ಎಂಎಸ್ ಮೂಲಕ ಮಾಹಿತಿ ರವಾನಿಸಲಾಗುವುದು. ಈ ಎಸ್ಎಂಎಸ್ ನಲ್ಲಿ ಅಭ್ಯರ್ಥಿಗಳು ಅಂಕಪಟ್ಟಿಯನ್ನು ಡೌನ್‌ಲೊಡ್ ಮಾಡಿಕೊಳ್ಳಲು ಲಿಂಕನ್ನು ನೀಡಲಾಗುವುದು. ಲಿಂಕ್‌ಅನ್ನು ಕ್ಲಿಕ್ ಮಾಡಿದಾಗ ಅಭ್ಯರ್ಥಿಗಳಿಗೆ Front end screen ಪ್ರದರ್ಶಿತವಾಗುತ್ತದೆ. Front end screen ನಲ್ಲಿ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ, ತಮ್ಮ ಹೆಸರಿನ ಪ್ರಾರಂಭಿಕ ಮೂರು ಅಕ್ಷರಗಳು (English Capital Letters) ಹಾಗೂ ಜನ್ಮ ದಿನಾಂಕ (DD/MM/YYYY)ವನ್ನು ಅಭ್ಯರ್ಥಿಯ ಪ್ರವೇಶ ಪತ್ರದಲ್ಲಿರುವಂತೆ ನಮೂದಿಸುವುದು.ನೊಂದಾಯಿತ ಮೊಬೈಲ್ ಸಂಖ್ಯೆಗೆ ಬರುವ OTP ನಮೂದಿಸುವುದು, ನಂತರ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಅಭ್ಯರ್ಥಿಯು ಅಂಕಪಟ್ಟಿಯನ್ನು ಆನ್‌ಲೈನ್ ಮೂಲಕ ಪಡೆಯಲು ಅಂಕಪಟ್ಟಿ ಪ್ರಕಟಿಸಿದ ದಿನಾಂಕದಿಂದ 1 ತಿಂಗಳ ಒಳಗೆ ಪಡೆಯಲು ಕಾಲಾವಕಾಶವನ್ನು ಕಲ್ಪಿಸಲಾಗುತ್ತದೆ. ತದನಂತರ ಲಿಂಕ್‌ಅನ್ನು ನಿಷ್ಕ್ರಿಯಗೊಳಿಸಲಾಗುವುದು, ಎಂಬ ಮಾಹಿತಿಯನ್ನು ಅಭ್ಯರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ಲಿಂಕ್ ನೀಡುವ ಸಂದರ್ಭದಲ್ಲಿ ಎಸ್.ಎಮ್.ಎಸ್ ಮೂಲಕ ನೀಡಲಾಗುವುದು.
- **ನೊಂದಾಯಿಸಿದ ಮೊಬೈಲ್ ಸಂಖ್ಯೆ ಬದಲಾಯಿಸುವ ಬಗ್ಗೆ :-** ಒಂದು ವೇಳೆ ರಿಜಿಸ್ಟರ್ಡ್ ಮೊಬೈಲ್ ಸಂಖ್ಯೆ ಲಭ್ಯವಿಲ್ಲದಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರ ಮೂಲಕ ಮನವಿ ಪತ್ರದೊಂದಿಗೆ ಮಂಡಲಿಗೆ ಮಾಹಿತಿ ನೀಡಿ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

- **ಅಂಕಪಟ್ಟಿಯಲ್ಲಿನ ಮಾಹಿತಿಗಳಲ್ಲಿ ದೋಷವಿದ್ದಲ್ಲಿ ಸರಿಪಡಿಸುವ ಬಗ್ಗೆ:-** ಡೌನ್‌ಲೋಡ್ ಮಾಡಿಕೊಂಡ ಅಂಕಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು, ತಂದೆ, ತಾಯಿಯ ಹೆಸರು ತಿದ್ದುಪಡಿ ಆಗ ಬೇಕಾದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅಂಕಪಟ್ಟಿ ಆನ್‌ಲೈನ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅಂಕಪಟ್ಟಿಯಲ್ಲಿ ತಿದ್ದುಪಡಿಗಳಿದ್ದಲ್ಲಿ ರೂ.200/- ದಂಡ ಶುಲ್ಕವನ್ನು NEFT ಚಲನ್‌ನಲ್ಲಿ ಜಮಾಮಾಡಿ ಮೂಲ ಚಲನ್ ಪ್ರತಿಯೊಂದಿಗೆ, ಪ್ರಸ್ತಾವನೆಯನ್ನು ಸಂಸ್ಥೆಯ ಮುಖ್ಯಸ್ಥರು ಡಯಟ್ ಪ್ರಾಂಶುಪಾಲರ ಮುಖಾಂತರ ಮಂಡಳಿಗೆ ಸಲ್ಲಿಸಿ ತಿದ್ದುಪಡಿ ಪಡೆಯಬಹುದು.
- **ಅಂಕಪಟ್ಟಿಯ ನಕಲು ಪ್ರತಿ ಪಡೆಯುವ ಬಗ್ಗೆ:-** ಒಂದು ತಿಂಗಳ ನಂತರ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಅಂಕಪಟ್ಟಿ /ಉತ್ತೀರ್ಣ ಪ್ರಮಾಣಪತ್ರ(Passing Certificate) ಪಡೆಯುವ ಅವಶ್ಯಕತೆ ಉಂಟಾದಲ್ಲಿ ದ್ವಿತೀಯ, ಪ್ರತಿಗೆ ಒಂದು ಅಂಕಪಟ್ಟಿಗೆ ಶುಲ್ಕ ರೂ.875/-(ತುರ್ತು ಸೇವೆ ಬಯಸಿದಲ್ಲಿ ಶುಲ್ಕ ರೂ.1750/- NEFT ಚಲನ್ ನಲ್ಲಿ ಜಮಾ ಮಾಡಿ ಮಂಡಲಿಯನ್ನು ಸಂಪರ್ಕಿಸಿ ನಿಯಮಾನುಸಾರ ಅಂಕಪಟ್ಟಿಯ ಪ್ರತಿಯನ್ನು ಪಡೆಯಬಹುದು.
- **ಮಂಡಲಿಯಿಂದ ಭೌತಿಕ ಉತ್ತೀರ್ಣ ಪ್ರಮಾಣ ಪತ್ರ ವಿತರಿಸುವ ಬಗ್ಗೆ:-**ಭೌತಿಕ ಉತ್ತೀರ್ಣ ಪ್ರಮಾಣ ಪತ್ರವನ್ನು(Passing Certificate) ಪ್ರಥಮ ಮತ್ತು ದ್ವಿತೀಯ ಡಿ.ಪಿ.ಎಸ್.ಇ ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳು ಹಾಗೂ ಗಳಿಸಿದ ಶ್ರೇಣಿಯನ್ನೊಳಗೊಂಡು ನೇರವಾಗಿ ಮಂಡಲಿಯಿಂದ ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸಲಾಗುವುದು. ಉತ್ತೀರ್ಣರಾದ ಅಭ್ಯರ್ಥಿಗಳು ಮಂಡಲಿಯಿಂದ ನೀಡಲಾದ ಉತ್ತೀರ್ಣ ಪ್ರಮಾಣ ಪತ್ರವನ್ನು(Passing Certificate) ಸಂಸ್ಥೆಯಿಂದ ಕಡ್ಡಾಯವಾಗಿ ಪಡೆದುಕೊಳ್ಳುವುದು. ಉತ್ತೀರ್ಣ ಪ್ರಮಾಣ ಪತ್ರವನ್ನು ಪಡೆಯದೆ ಇದ್ದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಅಂಕಪಟ್ಟಿಗಳು ಊರ್ಜಿತವಾಗುವುದಿಲ್ಲ. ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಗೆ ಸಂಬಂಧಿಸಿದ ಅಭ್ಯರ್ಥಿಗಳು ಅಂಕಪಟ್ಟಿಗಳನ್ನು ಡೌನ್ ಲೋಡ್ ಮಾಡಿಕೊಂಡ ಬಗ್ಗೆ ಖಾತರಿಪಡಿಸಿಕೊಂಡು ಮಂಡಲಿಗೆ ವರದಿ ಸಲ್ಲಿಸುವುದು ಕಡ್ಡಾಯ.
- ಅಂಕಪಟ್ಟಿಯಲ್ಲಿ ಮುದ್ರಿಸಲಾದ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಈ ಅಂಕಪಟ್ಟಿಯ ದೃಢೀಕರಣವನ್ನು ಪರಿಶೀಲಿಸಬಹುದು.

**ಸೂಚನೆ:-ಆನ್‌ಲೈನ್‌ಮೂಲಕ ಪಡೆದ DIGITALLY SIGNED ಅಂಕಪಟ್ಟಿಗಳು ಮಂಡಲಿಯಿಂದ ವಿತರಿಸುವ ಪ್ರಮಾಣಪತ್ರವಿದ್ದಲ್ಲಿ ಮಾತ್ರ ಮಾನ್ಯವಾಗುತ್ತದೆ. ಎನ್ನುವ ವಿಷಯವನ್ನು ಗಮನಿಸುವುದು.**

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು(ಪರೀಕ್ಷೆಗಳು)

ಪ್ರತಿಯನ್ನು:

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಅಗತ್ಯ ಮಾಹಿತಿಗಾಗಿ.
3. ಪ್ರಾಂಶುಪಾಲರು ಟಿಟಿಐ ಕಾಲೇಜು, ಹೊಸದುರ್ಗ/ GTW ಕಲಬುರಗಿ ರವರ, ಅಭ್ಯರ್ಥಿಗಳಿಗೆ ಆನ್‌ಲೈನ್ ಅಂಕಪಟ್ಟಿ ಪಡೆಯುವಲ್ಲಿ ಸೂಕ್ತ ಮಾರ್ಗದರ್ಶನ ಹಾಗೂ ತಿಳುವಳಿಕೆ ನೀಡುವುದು.
4. ಕಛೇರಿ ಪ್ರತಿ.